# ಕರ್ನಾಟಕ ಏಕೀಕರಣ ಮತ್ತು ಕುವೆಂಪು

**ಸೀತಾ ಹೆಚ್. ಎನ್.**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನಂಜನಗೂಡು.

**Article Link: https://aksharasurya.com/2024/02/seetha-h-n.php**

## ABSTRACT:

ಕನ್ನಡ, ಕರ್ನಾಟಕ ಮತ್ತು ಕುವೆಂಪು ಈ ಮೂರೂ ಈಗ ಅವಿಭಾಜ್ಯವಾದ ಮತ್ತು ಅಭಿನ್ನವಾದ ವಸ್ತುಗಳಾಗಿವೆ, ತತ್ತ್ವಗಳಾಗಿವೆ, ಶಕ್ತಿಗಳಾಗಿವೆ. ಕನ್ನಡ ಮತ್ತು ಕರ್ನಾಟಕ ಕುವೆಂಪು ಅವರನ್ನು ಕಡೆದಂತೆ, ಕುವೆಂಪು ಕನ್ನಡ ಮತ್ತು ಕರ್ನಾಟಕಗಳ ಕೀರ್ತಿ ಮಹಿಮೆಗಳನ್ನು ಮುಗಿಲೆತ್ತರಕ್ಕೇರಿಸಿದ್ದಾರೆ, ಜಗದಗಲಕ್ಕೂ ಹರಡಿದ್ದಾರೆ. ಕುವೆಂಪು ಅವರು ರಾಜಕೀಯದೊಳಗಿರಲಿ, ಆಚೆಯಿರಲಿ ಕುಳಿತಲ್ಲಿಂದಲೇ ವಿದ್ಯಮಾನಗಳನ್ನು ಗ್ರಹಿಸುವ ಶಕ್ತಿ ಅವರ ಕಲ್ಪನಾ ಪ್ರತಿಭೆಗಿದೆ. ಕನ್ನಡದ ಪಾರಮ್ಯಕ್ಕಾಗಿ, ನಾಡಿನ ಏಕೀಕರಣಕ್ಕಾಗಿ ಬರಹ, ಭಾಷಣಗಳ ಮೂಲಕ ನಿರಂತರವಾಗಿ ಹೋರಾಟ ನಡೆಸಿದ್ದಾರೆ. ಸಂಕುಚಿತ ದೃಷ್ಟಿಯ ಜಡವಾದಿ ಪ್ರಗತಿ ವಿರೋಧಿ ರಾಜಕೀಯ ವಿರುದ್ಧವಾಗಿ ಸಮರವನ್ನೇ ಘೋಷಿಸಿದ್ದುಂಟು. ಕನ್ನಡ ನಾಡು ಒಂದಾಗಬೇಕು, ಕನ್ನಡ ಜನ ಒಂದಾಗಬೇಕು ಎಂದು ಹಂಬಲಿಸಿ ಲೇಖನ ಭಾಷಣಗಳ ಮೂಲಕ ಹಂಬಲವನ್ನು ತೋಡಿಕೊಳ್ಳುತ್ತ, ರಾಜ–ಕಾರಣಿಗಳಿಗೂ ಯುವಕರಿಗೂ ಪ್ರಚೋದಕ ಶಕ್ತಿಯಾಗಿ, ಪ್ರವಾದಿಯಾಗಿ ಕಾಣಿಸಿಕೊಳ್ಳುತ್ತಾರೆ. ಮೈಮನಗಳಲ್ಲಿ, ಕನ್ನಡತನ ಹರಿದಾಡುವುದಾದರೆ ಮೆಟ್ಟುವ ನೆಲ ಕರ್ನಾಟಕವಾಗುತ್ತದೆ. ಕರ್ನಾಟಕ ಏಕೀಕರಣ ಆಗಬೇಕೆಂಬುದೇ ಕುವೆಂಪು ಅವರ ಆಶಯವಾಗಿತ್ತು ಎಂಬುದೇ ಲೇಖನದ ಉದ್ದೇಶವಾಗಿದೆ.

## KEY WORDS:

ಭರತ ಖಂಡದ ಸ್ವಾತಂತ್ರ್ಯ, ಕರ್ನಾಟಕ ಏಕೀಕರಣ, ಕನ್ನಡ, ಕರ್ನಾಟಕ, ಕುವೆಂಪು.

ರಾಷ್ಟ್ರದ ಸ್ವಾತಂತ್ರ್ಯನಂತರ ಕರ್ನಾಟಕ ಏಕೀಕರಣದ ಹೋರಾಟ ತೀವ್ರವಾಗಿ ಜರುಗುತ್ತಿದ್ದ ಕಾಲದಲ್ಲಿ ಯಾವ ಮುಲಾಜಿಗೂ ಸೊಪ್ಪು ಹಾಕದೆ, ಅದರ ಪರವಾಗಿ ತಮ್ಮೆಲ್ಲ ಶಕ್ತಿಯನ್ನು ಧಾರೆಯೆರೆದವರು ಕುವೆಂಪು. ಕನ್ನಡದ ಪಾರಮ್ಯಕ್ಕಾಗಿ, ನಾಡಿನ ಏಕೀಕರಣಕ್ಕಾಗಿ ಬರೆಹ, ಭಾಷಣಗಳ ಮೂಲಕ ನಿರಂತರವಾಗಿ ಹೋರಾಟ

ನಡಸಿದ್ದಾರೆ. ಕರ್ನಾಟಕ ಏಕೀಕರಣ ಹಳೆಯ ಮೈಸೂರಿನ ಬಹುಭಾಗದ ಜನರಿಗೆ ಬೇಕಾಗಿರಲಿಲ್ಲ. ಆದರೆ ಕುವೆಂಪುರವರು ಅವರ ವೈರುಧ್ಯದ ನಂಜನ್ನೆಲ್ಲ ಉಂಡು ನಂಜುಂಡನಂತೆ ಯಾರಿಗೂ ಹೆದರದೆ, ಬೆಚ್ಚದೆ, ಹಿಂಜರಿಯದೆ ಕರ್ನಾಟಕ ಏಕೀಕರಣ ಮುಂಚೂಣಿಯಲ್ಲಿ ನಿಂತರು.

ಕನ್ನಡ ನಾಡು ಒಂದಾಗಬೇಕು, ಕನ್ನಡ ಜನ ಒಂದಾಗಿ ಬಾಳಬೇಕು ಎಂದು ಹಂಬಲಿಸಿ, ಲೇಖನ ಭಾಷಣಗಳ ಮೂಲಕ ಹಂಬಲವನ್ನು ತೋಡಿಕೊಳ್ಳುತ್ತ, ರಾಜಕಾರಣಿಗಳಿಗೂ ಯುವಕರಿಗೂ ಅವರು ಪ್ರಚೋದಕ ಶಕ್ತಿಯಾಗಿ ಪ್ರವಾದಿಯಾಗಿ ಕಾಣಿಸಿಕೊಳ್ಳುತ್ತಾರೆ. ಸಂಸ್ಕೃತಿ ಕರ್ಣಾಟಕ ಸ್ಥಾಪನೆ ಅವರ ಪ್ರಧಾನೋದ್ದೇಶವೇ ಹೊರತು, ರಾಜಕೀಯ ಕರ್ಣಾಟಕ ಸ್ಥಾಪನೆಯಿಂದ ತಮ್ಮ ಉದ್ದೇಶ ಈಡೇರುವುದಾದರೆ ಅದು ಬೇಡವೆನ್ನುವುದಿಲ್ಲ. ಈ ಉದ್ದೇಶ ಸಾಧನೆಗಾಗಿ ಅವರು ಹಲವಾರು ರೀತಿ ಶ್ರಮಿಸಿದ್ದಾರೆ. ಕವನ ರಚಿಸಿ ಭಾವಾವೇಶದಿಂದ ಸಾರ್ವಜನಿಕ ವೇದಿಕೆಗಳಲ್ಲಿ ಓದಿ ಜನ ಹೃದಯವನ್ನು ಪ್ರಚೋದಿಸಿದ್ದಾರೆ; ಭಾಷಣ ಮಾಡಿ ತರುಣರ ರಕ್ತವನ್ನು ಕುದಿಸಿದ್ದಾರೆ; ತಮ್ಮ ಬಳಿಗೆ ಬಂದವರನ್ನು ಮಾತಿನ ಮೋಡಿಯಿಂದ ಮತಾಂತರಗೊಳಿಸಿ ದೀಕ್ಷೆ ಕೊಟ್ಟಿದ್ದಾರೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ಕರ್ನಾಟಕದಲ್ಲಿ ಸೇರಲು ಸಕಾಲವಲ್ಲವೆಂದು ತೀರ್ಮಾನ ಕೈಗೊಂಡ ಸಂದರ್ಭದಲ್ಲಿ;

**ದೀಕ್ಷೆಯ ತೊಡು ಇಂದೇ;**
**ಕಂಕಣ ಕಟ್ಟಿಂದೇ!**
**ಕನ್ನಡ ನಾಡೊಂದೇ;**
**ಇನ್ನೆಂದೂ ತಾನೊಂದೇ!**
**ಇಡು ನಿನ್ನಯ ಸತಿಯಾಣೆ!**
**ಇಡು ನಿನ್ನಯ ಪತಿಯಾಣೆ!**
**ಮಕ್ಕಳ ಮೇಲಾಣೆ!**
**ಗುರುದೇವನ ಆಣೆ!**
**ನನ್ನಾಣೆ!**
**ನಿನ್ನಾಣೆ!**
**ಕನ್ನಡ ಜನರೆಲ್ಲರ ಮೇಲಾಣೆ!**
**ಕನ್ನಡ ನಾಡೊಂದಾಗದೆ ಮಾಣೆ!**

'ಕರ್ನಾಟಕ ಮಂತ್ರ ದೀಕ್ಷೆ'ಯನ್ನು ರಚಿಸುತ್ತಾರೆ. ಎಲ್ಲೆಲ್ಲಿಯೂ ಪರಸ್ಪರ ಸಂದೇಹ, ದ್ವೇಷ, ಮಾತ್ಸರ್ಯ, ಉದ್ವಿಗ್ನತೆ, ಉರಿಯುತ್ತಿದ್ದ ಪ್ರಲಯೋಪಮೆ ಸಂದರ್ಭದಲ್ಲಿ ಕನ್ನಡನಾಡಿನ ಪ್ರಾಚೀನ ಕವಿ, ಗುರು, ಸಂತ, ರಾಜ ಸಮೂಹದ

ಸಾಕ್ಷಿತ್ವದಲ್ಲಿ ಕನ್ನಡನಾಡಿನ ಪಶುಪಕ್ಷಿಗಳಿಗೆಲ್ಲ ಕೇಳಿಸುವಂತೆ, ಕನ್ನಡ ನಾಡಿನ ಪ್ರಾಕೃತಿಕ ಶಕ್ತಿಗಳ ಮೇಲಾಣೆಯಿಟ್ಟು ಸತಿಸುತರ ಮೇಲೆ, ಗುರುದೇವರ ಮೇಲೆ, ಕನ್ನಡ ಜನರೆಲ್ಲರ ಮೇಲೆ ಆಣೆಯಿಟ್ಟು ದೀಕ್ಷಾ ಗೀತೆಯನ್ನು ಉದ್ಘೋಷಿಸುತ್ತಾರೆ.

ಕವಿರವೀಂದ್ರರು ಭಾರತ ರಾಷ್ಟ್ರಕ್ಕೆ ಜನಗಣಮನ ನೀಡಿದಂತೆ ತಾವೂ 'ಕರ್ನಾಟಕಕ್ಕೆ ಒಂದು ರಾಷ್ಟ್ರಗೀತೆ ನೀಡುವ ಪ್ರಯತ್ನವೆಂಬಂತೆ ಕುವೆಂಪು 1924 ರಲ್ಲಿಯೇ ಕರ್ಣಾಟಕ ರಾಷ್ಟ್ರಗೀತೆ' ಯನ್ನು ರಚಿಸಿದರು. ಕುವೆಂಪು ಈ ಗೀತೆಯನ್ನು ರಚಿಸಿದಾಗ ಭಾರತವಿನ್ನೂ ಸ್ವಾತಂತ್ರ್ಯವಾಗಿರಲಿಲ್ಲ. ಭಾರತ ಸ್ವಾತಂತ್ರ್ಯದ ಕನಸು ಆಗ ತಾನೇ ಮೊಳೆಯುತ್ತಿತ್ತು. ಅಲ್ಲದೆ ಕರ್ನಾಟಕ ಎಂಬ ರಾಜ್ಯವೂ ಅಸ್ತಿತ್ವದಲ್ಲಿರಲಿಲ್ಲ. ಕರ್ನಾಟಕಕ್ಕೆ, ಈಗಿರುವ ಭೌಗೋಳಿಕ ಎಲ್ಲೆಗಳಿರಲಿಲ್ಲ. ಕರ್ನಾಟಕದ ಭೂಭಾಗ ಆಗ ಮೈಸೂರು ರಾಜ್ಯವೆಂದು ಕರೆಯಲ್ಪಡುತ್ತಿತ್ತು. ಏಕೆಂದರೆ ಈ ಭಾಗವನ್ನು ಕನ್ನಡ ಅರಸರಾದ ಮೈಸೂರು ಒಡೆಯರು ಆಳುತ್ತಿದ್ದರು. ಆದರೆ ಮೈಸೂರಿನ ಭೂಭಾಗವಷ್ಟೇ ಕನ್ನಡದ ನಾಡಾಗಿರಲಿಲ್ಲ ಎಂಬುದನ್ನು ಗಮನಿಸಬೇಕು. ಹರಿದು ಹಂಚಿಹೋಗಿದ್ದ ಕನ್ನಡ ನಾಡಿನ ಭಾಗಗಳು ಒಂದುಗೂಡುತ್ತವೆ ಎಂಬ ಕನಸೂ ಕನ್ನಡಿಗರಿಗೆ ಅಂದು ಇರಲಿಲ್ಲ. ಈ ಹಿನ್ನೆಲೆಯಲ್ಲಿ ಗೀತೆಯ ವಿಶ್ಲೇಷಣೆ ಪಡೆಯುತ್ತದೆ. ವಾಸ್ತವದಲ್ಲಿ ನಮ್ಮ ನಾಡಿಗೆ 'ಕರ್ನಾಟಕ' ಎಂಬ ಹೆಸರಿಡುವ ಕಲ್ಪನೆಯೇ ಆಗ ಇರಲಿಲ್ಲ. ಅಂಥ ಸಂದರ್ಭದಲ್ಲಿ ಶ್ರೀ ಕುವೆಂಪು ಮೈಸೂರಿಗರಾಗಿಯೂ, ಮೈಸೂರು ರಾಜ್ಯದ ರಾಜಪ್ರಭುತ್ವದಡಿಯಲ್ಲಿ ಬದುಕುವ ಒಬ್ಬ ಸರ್ಕಾರಿ ನೌಕರರಾಗಿಯೂ 'ಕರ್ನಾಟಕ' ಎಂಬ ಪದಕ್ಕೆ ಅಂಟಿಕೊಂಡು ಹೋರಾಡಿದ ದಿಟ್ಟರು. 'ಕರ್ನಾಟಕ ಏಕೀಕರಣಕ್ಕೆ ಅಪಸ್ವರಗಳು ಬಂದಾಗ 'ಅಖಂಡ ಕರ್ನಾಟಕ' ಅಲ್ತೋ ನಿಮ್ಮ ಬೂಟಾಟದ ರಾಜಕೀಯ ನಾಟಕ' ಎಂದು ಸಿಡಿದೇಳುತ್ತಾರೆ.

ಏಕೀಕರಣದ ವಿಚಾರ ರಾಜಕೀಯ ವಿಷಯವೆಂದೂ ಸರ್ಕಾರಿ ನೌಕರರು ಆ ಬಗ್ಗೆ ಉಸಿರೆತ್ತ ಕೂಡದೆಂದೂ, ಅಂದಿನ ಕೆ. ಸಿ. ರೆಡ್ಡಿ ಸರ್ಕಾರ ಕುವೆಂಪುರವ–ರಿಗೆ ಎಚ್ಚರಿಕೆಯ ಪತ್ರವೊಂದನ್ನು ಕಳಿಸುತ್ತದೆ. ಆದರೆ ಕುವೆಂಪು ನಗು ನಗುತ್ತಲೇ ತಮ್ಮ ಬಳಿ ಬಂದವರ ಮುಂದೆ ಆ ಎಚ್ಚರಿಕೆಯ ಪತ್ರವವನ್ನೊದುತ್ತಾ ಇವರೆಷ್ಟೇ ಎಗರಾಡಿದರೂ ಏಕೀಕರಣ ಮಾತ್ರ ತಪ್ಪುವುದಿಲ್ಲ ಎಂದು ಘೋಷಿಸುತ್ತಾರೆ. ಆ ಸಂದರ್ಭದಲ್ಲಿ ಇತಿಹಾಸ ಪ್ರಸಿದ್ಧವೂ, ಅನನ್ಯವೂ ಆದ 'ಅಖಂಡ ಕರ್ಣಾಟಕ' ಎಂಬ ದಾರ್ಶನಿಕ ಕವಿತೆ ಕವಿಯ ಲೇಖನಿಯಿಂದ ಉದ್ಭವಿಸುತ್ತದೆ.

**ಅಖಂಡ ಕರ್ಣಾಟಕ**

**ಅಲ್ತೊ ನಮ್ಮ ಕೂಗಾಟದ ರಾಜಕೀಯ ನಾಟಕ**

**ಹರಸುತಿಹನು ದೇವಗಾಂಧಿ;**

**ಮಂತ್ರಿಸುಹುದು ಋಷಿಯ ನಾಂದಿ;**
**ತನಗೆ ತಾನೆ ಋತಸ್ಯಂದಿ**
**ಅವಂದ್ಯ ಕವಿಯ ಕಲ್ಪನೆ!**

ರಾಜಕೀಯ ಮೂಲವಾದ ದುರುದ್ದೇಶಗಳ ಈಡೇರಿಕೆ ಕುವೆಂಪು ಅವರ ಅಖಂಡ ಕರ್ಣಾಟಕದ ಕಲ್ಪನೆಯ ಗುರಿಯಲ್ಲ, ಅಖಂಡ ಕರ್ಣಾಟಕವೆಂಬುದು ಬೂಟಾಟದ ರಾಜಕೀಯ ನಾಟಕವಲ್ಲ. ಆತ್ಮ ಸಂಸ್ಕೃತಿಯ ಉದ್ಧಾರ ಮತ್ತು ಪರಮಾತ್ಮ ಸಾಕ್ಷಾತ್ಕಾರವೇ ಏಕೀಕೃತ ಕರ್ಣಾಟಕದ ಪರಮಗಂತವ್ಯ. ಸಾಮಾನ್ಯ ಜನರ ಆಶೆ ಆಕಾಂಕ್ಷೆಗಳು ಕವಿಹೃದಯವನ್ನು ಮಿಡಿಯುತ್ತವೆ. ಯಾವುದು ಅನೇಕ–ರಿಗೆ ಕನಸಾಗಿ ತೋರುತ್ತದೆಯೋ ಅದು ಕವಿಯ ಕಣ್ಣಿಗೆ ನನಸಾಗಿ ತೋರುತ್ತದೆ.

**ಇಂದು ಬಂದು ನಾಳೆ ಸಂದು**
**ಹೋಹ ಸಚಿವಮಂಡಲ**
**ರಚಿಸುವೊಂದು ಕೃತಕವಲ್ತೊ**
**ಸಿರಿಗನ್ನಡ ಸರಸ್ವತಿಯ**
**ವಜ್ರ ಕರ್ಣಕುಂಡಲ!**

ಕುವೆಂಪುರವರ ಕಲ್ಪನೆಯ ಸಚಿವ ಮಂಡಲ ಶಾಶ್ವತವಾದುದು. ಸರ್ಕಾರ ಬರುತ್ತವೆ, ಹೋಗುತ್ತವೆ ಕವಿ ಮಾತ್ರ ಅಚ್ಯುತನಾಗಿ ಉಳಿಯುತ್ತಾನೆ. ಇಂದಲ್ಲ ನಾಳೆ ಕವಿಯ ಕಾಣ್ಕೆ ಸತ್ಯವಾಗಲೇಬೇಕಾಯಿತು. ಗಾಂಧೀಜಿಯವರದೂ ಕವಿದೃಷ್ಟಿ ಅವರು ಕಂಡದ್ದೆಲ್ಲ ಸತ್ಯವಾಯಿತು. ಕವಿ ಕಂಡ 'ಕರ್ನಾಟಕ ಸಾಮ್ರಾಜ್ಯದ ಚಕ್ರವರ್ತಿ ನೃಪತುಂಗ; ಮುಖ್ಯಮಂತ್ರಿ ಪಂಪ: ರನ್ನ, ಜನ್ನ, ಹರಿಹರ, ನಾರಾಯಣ, ಷಡಕ್ಷರಾದಿ ಕವಿಗಳನ್ನೊಳಗೊಂಡ ನಿತ್ಯ ಸಚಿವ ಮಂಡಳಿಯದು. ಕವಿಯ ಲೇಖನ ಕಠಾರಿಯಾಗಿ ಹಂಗಾಮಿ ಸಚಿವನ ಗರ್ವದ ಡೊಳ್ಳನ್ನು ತಿವಿಯುತ್ತದೆ.

ಕರ್ನಾಟಕ ಏಕೀಕರಣಕ್ಕಾಗಿ ದೀಕ್ಷೆಯ ತೊಡು ಇಂದೇ; ಕಂಕಣ ಕಟ್ಟಿಂದೇ!... ಎಂದು ಕರೆ ನೀಡಿದ ಕವಿ, ಆ ಆದರ್ಶ ಈಡೇರಿದಾಗ ಪುಲಕಿತರಾಗಿ ಉದ್ಗ–ರಿಸುತ್ತಾರೆ;

**ಕನಸು ನನಸಾಯಿತಿದೊ, ಏಕೈಕ ಕರ್ಣಾಟಕ;**
**ಕಣ್‌ನಟ್ಟು ಬಯಸಿ ಕಾಣ್ ದಿಕ್‌ತಟ ಧ್ವಜಪಟ**

ಹೀಗೆ ಸಂಭ್ರಮಿಸುವಾಗ, 'ಬಾರಮ್ಮ ದೇವಿ, ಓ ತಾಯಿ ಭಾರತಿಯೆ ನಿನ್ನ ಮಗಳನು ಹರಸು' ಎಂದು ಬೇಡುವುದನ್ನು ಮರೆಯುವುದಿಲ್ಲ. ವಿಶಾಲ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಅಧಿಕೃತವಾಗಿ ನಾಮಕರಣವಾದಾಗ ಕುವೆಂಪು ಹಿಗ್ಗಿ

ಹಾಡುತ್ತಾರೆ.

**ಕರ್ನಾಟಕ, ಹಳೆಯದೆ ಅದು**
**ಹೊಸತಾಯಿತು ಹೆಸರು,**
**ತುಂಬುವುದಿದೆ ಜನಹೃದಯದ**
**ಭಾವೈಕ್ಯದ ಉಸಿರು.**

ಎನ್ನುತ್ತಾರೆ.

ಕರ್ನಾಟಕ ಏಕೀಕರಣಕ್ಕಾಗಿ ಕುವೆಂಪು ಅವರ ಮನಸ್ಸು ನಿತ್ಯವೂ ಚಡಪಡಿಸುತ್ತಿತ್ತು. ನಿರೀಕ್ಷೆಯ ತುದಿಗಾಲಿನ ಮೇಲೆ ನಿಂತು ಸೋದ್ವಿಗ್ನವಾಗಿ ಹಂಬಲಿಸುತ್ತಿತ್ತು. ಪೂಜಾಮಂದಿರದಲ್ಲಿ ಧ್ಯಾನಮಗ್ನರಾಗಿದ್ದಾಗಲೂ ಈ ಚಿಂತೆ ಅವರ ಮನಸ್ಸನ್ನು ಕಲಕುತ್ತಿದ್ದಿರಬೇಕು. ಶ್ರೀ ಗೊಮ್ಮಟ ಮಹಾಮಸ್ತಾಭಿಷೇಕ ಸಮಯದಲ್ಲಿ ಹಾಡಿದ ಪ್ರಗಾಥದಲ್ಲಿಯೂ ಕವಿಚೇತನ ನಾಡಿನ ಒಗ್ಗೂಡಿಕೆಗಾಗಿ ಹಾರೈಸುತ್ತದೆ, ಪ್ರಾರ್ಥಿಸುತ್ತದೆ.

**ನಿನ್ನ ಕನ್ನಡನಾಡನೊಂದುಗೂಡಿಸಿ ಕಾಯಿ;**
**ನಿನ್ನ ಕನ್ನಡ ನುಡಿಯನಾಡಿ ಧನ್ಯವಾಗಲಿ ನಮ್ಮ ಬಾಯಿ:**
**ಅನ್ಯಭಾಷಾ ಮೋಹದಾಸ್ಯಕ್ಕೆ ಪಕ್ಕಾಗದಿರಲೆಮ್ಮ ತಾಯಿ!**
**ನಿನ್ನ ಭಾರತಭೂಮಿ ನಿನ್ನುನ್ನತಿಗೆ ಬೆಳೆದು ನಿಲ್ಗೆ**

ಭಾರತ ಭಾಷಾವಾರು ಪ್ರಾಂತರಚನೆಯಾದಾಗ ಕವಿಚೇತನ ಸಂತುಷ್ಟಿಗಳಿಂದ ನಲಿದಾಡಿತು. ಚಿತ್ರದುರ್ಗದ 'ಕರ್ನಾಟಕ ಸಂಘ'ದ ಆಶ್ರಯದಲ್ಲಿ ಕುವೆಂಪು ಮಾತನಾಡುತ್ತ ತಮ್ಮ ಸಂತೋಷಾತಿಶಯವನ್ನು ಭಾವಾವೇಶದಿಂದ ವ್ಯಕ್ತಪಡಿಸಿದರು. 'ನಾವು ಪುಣ್ಯವಂತರು, ಒಂದೇ ಒಂದು ಜೀವಮಾನದಲ್ಲಿ ಸ್ವಾತಂತ್ರ್ಯಸಿದ್ಧಿ ಮತ್ತು ಪ್ರಾಂತರಚನೆಗಳೆರಡನ್ನೂ ಕಂಡಿದ್ದೇವೆ. ನನಸೊ ಕನಸೊ ಎಂದು ಭ್ರಮೆ ಮೂಡಿಸುವಷ್ಟು ಆಶ್ಚರ್ಯಕರವಾಗಿ ಇವೆರಡೂ ಸಂಭವಿಸಿವೆ. ಈಮಹಾದ್ಘಟನೆಗಳು ಪುಕ್ಕಟೆಯಾಗಿ ಸಿದ್ಧಿಸಿಲ್ಲ. ಚಳವಳಿ ಯುದ್ಧರೂಪವನ್ನು ತಾಳದಿದ್ದರೂ ಬಲಿರೂಪವನ್ನು ತಾಳಿತ್ತು. ಸ್ವಾತಂತ್ರ್ಯಕಾಳಿ ಸಾಕಷ್ಟು ಬಲಿತೆಗೆದುಕೊಂಡೇ ಪ್ರಸನ್ನಳಾದದ್ದು. ಆನೇಕ ಸ್ತ್ರೀಪುರುಷರ ಆಶ್ರುತರ್ಪಣದ ಜೊತೆಗೆ ಅದೆಷ್ಟು ಮಕ್ಕಳ ತರುಣದೇಹಗಳು ಬಲಿಯಾದವು? ನಾಡಿನ ಜನ ಏಕ–ರೀತಿಯಾಗಿ ಅಪೇಕ್ಷಿಸಿದರೆ ಎಂಥ ಶಕ್ತಿಯೂ ಮಣಿಯಬೇಕಾಗುತ್ತದೆ. ಸಾಹಿತಿಗಳು ಮೊದಲಿನಿಂದಲೂ ಕನ್ನಡನಾಡು ಒಂದಾಗಬೇಕೆಂದು ಸಾರುತ್ತಿದ್ದಾರೆ. ಕನ್ನಡನಾಡಿನ ಮೇಲಣ ಕಟ್ಟಭಿಮಾನ ಅವರ ಭಾರತೀಯತ್ವಕ್ಕೆ ಧಕ್ಕೆ ತಂದಿಲ್ಲ. ಕನ್ನಡತನ –ಭಾರತೀಯತ್ವಗಳನ್ನು ಕುರಿತಾದ ಕವಿಯ ಆದರದ ನಿಲುಮೆ, ಕನ್ನಡನಾಡಿನ

ಮಹಿಮೆ ಹಿರಿಮೆಗಳನ್ನು ಕೊಂಡಾಡುವಾಗಲೂ

**ಜಯ್ ಭಾರತ ಜನನಿಯ ತನುಜಾತೆ,**
**ಜಯ ಹೇ ಕರ್ಣಾಟಕ ಮಾತೆ!**

ಎಂದು ಸಂಭೋದಿಸುತ್ತಾರೆ. ಭಾರತಾಂಬೆಯೆ ಕನ್ಯೆ ಕನ್ನಡಾಂಬೆಯೇ ಧನ್ಯೆ! ಎಂದು ಮುಕ್ತಕಂಠದಿಂದ ಉದ್ಘೋಷಿಸುತ್ತಾರೆ. ಕವಿಯ ಪ್ರಾದೇಶಿಕ ಪ್ರೇಮ ಪ್ರತ್ಯೇಕವಾಗಿ ನಿಲ್ಲದೆ ದೇಶಪ್ರೇಮದ ಅಂಗವಾಗಿ ಕಾಣಿಸಿಕೊಳ್ಳುತ್ತದೆ.

**ಭಾರತಾಂಬೆಯೆ ಜನಿಸಿ ನಿನ್ನೊಳು ಧನ್ಯನಾದೆನು ದೇವಿಯೆ**
**ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು ತಾಯಿಯೆ**

ಕವಿ ಭಾರತೀಯರಾಗಿ ಹುಟ್ಟಿದ್ದೇ ಹೆಮ್ಮೆ ಎಂದು ಹರ್ಷದಿಂದ ಹಾಡುತ್ತಾರೆ. ಕನ್ನಡ, ಕರ್ಣಾಟಕ ಮತ್ತು ಕುವೆಂಪು ಈ ಮೂರು ಈಗ ಅವಿಭಾಜ್ಯವಾದ ಮತ್ತು ಅಭಿನ್ನವಾದ ವಸ್ತುಗಳಾಗಿವೆ, ಶಕ್ತಿಗಳಾಗಿವೆ. ಕನ್ನಡ, ಮತ್ತು ಕರ್ಣಾಟಕ ಕುವೆಂಪು ಅವರನ್ನು ಪಡೆದಂತೆ, ಕುವೆಂಪು, ಕರ್ಣಾಟಕದ ಕೀರ್ತಿ ಮಹಿಮೆಗಳನ್ನು ಮುಗಿಲೆತ್ತರಕ್ಕೇರಿಸಿದ್ದಾರೆ. ಜಗದಗಲಕ್ಕೂ ಹರಡಿದ್ದಾರೆ. ಒಟ್ಟಾರೆ ಕುವೆಂಪುರವರು ಸುಮಾರು ಅರ್ಧ ಶತಮಾನಗಳ ದೀರ್ಘಾವಧಿಯ ತಪಶ್ಯಕ್ತಿಯನ್ನು ನಾಡು ನುಡಿಗಳ ಶ್ರೇಯೋತ್ಕರ್ಷಕ್ಕಾಗಿ ಧಾರೆಯೆರೆದಿದ್ದಾರೆಂದರೆ ಉತ್ಪ್ರೇಕ್ಷೆಯಾಗಲಾರದು.

**ಪರಾಮರ್ಶನ ಗ್ರಂಥಗಳು:**


1. ಸಿ.ಪಿ.ಕೆ. (2014). ಕುವೆಂಪು ಸಾಹಿತ್ಯಾವಲೋಕನ. ಅಖಿಲಾ ಏಜೆನ್ಸೀಸ್. ಮೈಸೂರು.
2. ದೇಜಗೌ. (2014). ಕುವೆಂಪು ಸಾಹಿತ್ಯ ವಿಲೋಕನ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
3. ದೇಜಗೌ. (2006). ಕುವೆಂಪು ದರ್ಶನ: ಸಂಪುಟ–1. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
4. ದೇಜಗೌ. (2007). ಕುವೆಂಪು ದರ್ಶನ: ಸಂಪುಟ–2. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.